ಕರ್ನಾಟಕ Government ಸರ್ಕಾರ of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

DEPARTMENT OF STATE EDUCATIONAL RESEARCH AND TRAINING

No 4, 100 FT RING ROAD, BANASHANKARI 3 RD STAGE BENGALURU - 560 085

Email: dpi.dsert-ka@nic.in Website: http://dsert.kar.nic.in

ಡಿಎಸ್ಇಆರ್‌ಟಿ DSERT

Phone - 080 26980100

Fax - 080 26422377

ಸಂಖ್ಯೆ: ಒಬಿ4/ಕಛೇರಿ/ವಾಹನ/ವಿಲೇವಾರಿ/15/18-19 ದಿನಾಂಕ: 03/12/2018

## ಬಹಿರಂಗ ಹರಾಜು ಪ್ರಕಟಣೆ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬನಶಂಕರಿ 3ನೇ ಹಂತ, ಬೆಂಗಳೂರು – 560085, ಕೆಳಕಂಡ ಕಛೇರಿ ವಾಹನವನ್ನು ದಿನಾಂಕ: 17/12/2018 ರಂದು ಸಂಜೆ 3.30 ಗಂಟೆಗೆ ಬಹಿರಂಗ ಹರಾಜಿನಲ್ಲಿ ವಿಲೇ ಮಾಡಲು ಉದ್ದೇಶಿಸಿದ್ದು, ಆಸಕ್ತ ಖರೀದಿದಾರರು ಹರಾಜಿನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ. ಹರಾಜಿನ ವಿವರಗಳು ಕೆಳಕಂಡಂತಿವೆ.

| ಕ್ರ.ಸಂ. | ವಾಹನದ ಸಂಖ್ಯೆ ಹಾಗೂ ಮಾಹಿತಿ | ಪ್ರಾದೇಶಿಕ ಸಾರಿಗೆ ಕಛೇರಿಯಿಂದ ನಿಗದಿಪಡಿಸಲಾದ ದರ | ಇ.ಎಂ.ಡಿ ಮೊತ್ತ (ಬ್ಯಾಂಕ್ ಹುಂಡಿ ಮೂಲಕ) |
|---|---|---|---|
| 1 | KA01-G2787 ಟೆಂಪೋ ಟ್ರಾವಲರ್ | ರೂ. 70,000/- | ರೂ. 7,000/- |
| 2 | KA05-G-6002 ಟಾಟಾ ಸುಮೋ(LMV) | ರೂ. 25,000/ | ರೂ. 2,500/- |
| 3 | KA05-G-6004 ಟಾಟಾ ಸುಮೋ(LMV) | ರೂ. 25,000/ | ರೂ. 2,500/- |
| 4 | KA05-G-6007 ಟಾಟಾ ಇಂಡಿಕಾ (LMV) | ರೂ. 25,000/ | ರೂ. 2,500/- |

**ನಿಬಂಧನೆಗಳು :-**

1. "ಎಲ್ಲಿ ಹೇಗಿದೆಯೋ ಹಾಗೆ" (As is where is condition) ಸ್ಥಿತಿಯಲ್ಲಿ ವಿಲೇವಾರಿ ಮಾಡಲಾಗುವುದು.
2. ಹರಾಜು ಮಾಡಲಾಗುವ ವಾಹನವನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬನಶಂಕರಿ 3ನೇ ಹಂತ, ಬೆಂಗಳೂರು – 560085, ಇಲ್ಲಿನ ನೆಲಮಹಡಿಯಲ್ಲಿ ನಿಲ್ಲಿಸಲಾಗಿದ್ದು, ಆಸಕ್ತ ಖರೀದಿದಾರರು ಖುದ್ದಾಗಿ ವೀಕ್ಷಿಸಲು ಅವಕಾಶವಿರುತ್ತದೆ.
3. ಹರಾಜಿನಲ್ಲಿ ಭಾಗವಹಿಸುವ ಆಸಕ್ತ ಖರೀದಿದಾರರು ಮರುಹೊಂದಿಸಲಾಗುವ ಠೇವಣಿ ಹಣವನ್ನು ಹರಾಜಿನ ದಿನಾಂಕದ ಮೂರು ದಿನ ಮುಂಚಿತವಾಗಿ ಈ ಕಛೇರಿಗೆ ಬ್ಯಾಂಕ್ ಹುಂಡಿಗಳ (ಡಿ.ಡಿ) ಮೂಲಕ ಜಮಾ ಮಾಡುವುದು ಹಾಗೂ ಭಾವ ಚಿತ್ರದೊಂದಿಗೆ ಆಧಾರ್‌ಕಾರ್ಡ್ / ಪಾನ್‌ಕಾರ್ಡ್ / DL ದೃಢೀಕರಿಸಿದ ಪ್ರತಿಗಳ ಗುರುತಿನ ಚೀಟಿಯ ನಕಲು ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು. ಯಾವುದೇ ಕಾರಣಕ್ಕೂ ನಗದು ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.
4. ಹರಾಜಿನಲ್ಲಿ ಯಶಸ್ವಿಯಾಗುವ ಖರೀದಿದಾರರು ಹರಾಜು ಮೊತ್ತದ ಉಳಿಕೆ ಬಾಬ್ತನ್ನು ಹರಾಜಿನ ನಂತರದ ಮೂರು ಕೆಲಸದ ದಿನಗಳ ಒಳಗೆ ಪಾವತಿ ಮಾಡಬೇಕಿರುತ್ತದೆ. ಹಣವನ್ನು " Director DSERT " ಇವರ ಹೆಸರಿಗೆ ಬ್ಯಾಂಕ್ ಹುಂಡಿ ಮೂಲಕ ಪಾವತಿಸುವುದು.
5. ಹರಾಜಿನಲ್ಲಿ ಪ್ರಾದೇಶಿಕ ಸಾರಿಗೆ ಕಛೇರಿಯಿಂದ ನಗದಿಪಡಿಸಲಾದ ದರಕ್ಕಿಂತ ಹೆಚ್ಚಿನ ದರವನ್ನು ಸೂಚಿಸುವ ಖರೀದಿದಾರರಿಗೆ ಸಂಬಂಧಿಸಿದ ವಾಹನವನ್ನು ವಿಲೇವಾರಿ ಮಾಡುಲಾಗುವುದು.
6. ಹರಾಜಿನಲ್ಲಿ ಯಶಸ್ವಿಯಾಗುವ ಖರೀದಿದಾರರು ಸಂಬಂಧಿಸಿದ ವಾಹನದ ಮೊತ್ತದ ಮೇಲೆ ನಿಯಮಾನುಸಾರ ಪಾವತಿಸಬೇಕಾದ ತೆರಿಗೆಯನ್ನು ಸಂಬಂಧಿಸಿದ ಕಛೇರಿಗೆ ಪಾವತಿಸಿ, ವಾಹನವನ್ನು ಸುಪರ್ಧಿಗೆ ಪಡೆಯುವ ಸಮಯದಲ್ಲಿ ಪಾವತಿಯ ದಾಖಲೆಯನ್ನು ಸಲ್ಲಿಸುವುದು.

C

7. ಒಂದು ಪಕ್ಷ ನಿಗದಿತ ದಿನಾಂಕದಂದು ಅನಿವಾರ್ಯ ಕಾರಣಗಳಿಂದ ಹರಾಜು ಪ್ರಕ್ರಿಯೆ ಮಾಡಲು ಆಗದಿದ್ದಲ್ಲಿ ಮುಂದಿನ ಕಾರ್ಯ ನಿರ್ವಹಣಾ ದಿನ Next Working Day ಸಾಯಂಕಾಲ 3-30 ಗಂಟೆಗೆ ಹರಾಜು ಮಾಡಲಾಗುವುದು.
8. ಹರಾಜನ್ನು ಮುಂದುಡುವ, ರದ್ದು ಮಾಡುವ ಅಥವಾ ನಿಬಂಧನೆಯನ್ನು ಮಾರ್ಪಡಿಸುವ ಅಧಿಕಾರ ನಿರ್ದೇಶಕರು ಹೊಂದಿರುತ್ತಾರೆ.
9. ಯಾವುದೇ ಖರೀದಿದಾರರು ಸೂಚಿಸುವ ದರವನ್ನು ಒಪ್ಪುವ ಅಥವಾ ತಿರಸ್ಕರಿಸುವ ಪೂರ್ಣ ಅಧಿಕಾರವನ್ನು ನಿರ್ದೇಶಕರು ಹೊಂದಿರುತ್ತಾರೆ. ಈ ಬಗ್ಗೆ ಯಾವುದೇ ತಕರಾರುಗಳಿಗೆ ಅವಕಾಶವಿರುವುದಿಲ್ಲ.

(ಹೆಚ್.ಎನ್.ಗೋಪಾಲಕೃಷ್ಣ)
ನಿರ್ದೇಶಕರು
ಡಿ.ಎಸ್.ಇ.ಆರ್.ಟಿ.
03/12/18

**ಈ ಬಹಿರಂಗ ಹರಾಜು ಪ್ರಕಟಣೆಯನ್ನು ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಿ, ಈ ಕುರಿತು ವ್ಯಾಪಕ ಪ್ರಚಾರವನ್ನು ನೀಡಲು ಕೋರಿದೆ.**

**ಮಾನ್ಯರಿಗೆ,**

1. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಕೆಂಪೇಗೌಡ ರಸ್ತೆ, ಬೆಂಗಳೂರು – 560001.
2. ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು, ಬೆಂಗಳೂರು ಜಿಲ್ಲಾ ಪಂಚಾಯತ್, ಬನಶಂಕರಿ, ಬೆಂಗಳೂರು.
3. ಪ್ರಾದೇಶಿಕ ಸಾರಿಗೆ ಆಯುಕ್ತರು ಕಛೇರಿ, ಕೋರಮಂಗಲ, ಬೆಂಗಳೂರು.
4. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.
5. ಜಂಟ ಆಯುಕ್ತರು, ಅಬಕಾರಿ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
6. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಕಛೇರಿ, ಬನಶಂಕರಿ, ಬೆಂಗಳೂರು.
7. ನಿರ್ದೇಶಕರು, ಪದವಿ ಪೂರ್ವ ಕಾಲೇಜು, ನಿರ್ದೇಶನಾಲಯ, ಮಲ್ಲೇಶ್ವರಂ, ಬೆಂಗಳೂರು.
8. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.
9. ನಿರ್ದೇಶಕರು, ಉರ್ದು & ಅಲ್ಪಸಂಖ್ಯಾತ ಭಾಷೆಗಳ ನಿರ್ದೇಶನಾಲಯ, ನೃಪತುಂಗ ರಸ್ತೆ, ಬೆಂಗಳೂರು.
10. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಕೆಂಪೇಗೌಡ ರಸ್ತೆ, ಬೆಂಗಳೂರು – 560001.
11. ಬೆಂಗಳೂರು ಜಿಲ್ಲೆಯ ವ್ಯಾಪ್ತಿಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಆಡಳಿತ) / ಉಪ ನಿರ್ದೇಶಕರು (ಅಭಿವೃದ್ಧಿ) ಹಾಗೂ ಬೆಂಗಳೂರು ಜಿಲ್ಲೆಯ ವ್ಯಾಪ್ತಿಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
12. ಕಛೇರಿ ಪ್ರತಿ.